


ಹಾಗೂ ವಿರೋಧಾಭಾಸ ಈ ವ್ಯವಸ್ಥೆಯ ಕ್ರೌರ್ಯದ ಉದಾಹರಣೆಯಾಗಿ ನಮ್ಮ ಮುಂದಿದೆ. ಗಾಂಧೀಜಿಯನ್ನು ಕೊಂದವರ ಶನಿಸಂತಾನಗಳಿಗೆ ಇವತ್ತು ಸರ್ಕಾರಗಳ, ಸಂಘಟನೆಗಳ, ಪಕ್ಷಗಳ ಕುಮ್ಮಕ್ಕಿದೆ. ಗಾಂಧೀಜಿಯ ನಾಡಿನಲ್ಲೇ ಗಾಂಧೀವಾದಿ ಚಳವಳಿಗಳನ್ನು ಮುರಿಯಲೆತ್ನಿಸುತ್ತಿರುವ ದೇಶೀ ಸರ್ಕಾರಗಳು ಬ್ರಿಟಿಷ್ ಸರ್ಕಾರಕ್ಕಿಂತ ಕ್ರೂರವಾಗಿವೆ. 'ನರ್ಮದಾ ಉಳಿಸಿ' ಆಂದೋಲನವನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ನಾಶ ಮಾಡಿದವು. ತಾವು ನೆಲೆಸಿರುವ ಅರಣ್ಯ, ನೆಲ, ಜಲಗಳನ್ನು, ಖನಿಜ ಸಂಪತ್ತನ್ನು ಉಳಿಸಲು ಇಂಡಿಯಾದ ಎಲ್ಲೆಡೆ ಆದಿವಾಸಿಗಳು ನಡೆಸುತ್ತಿರುವ ಶಾಂತಿಯುತ ಆಂದೋಲನಗಳನ್ನು ಬಗ್ಗು ಬಡಿಯಲು ಕಾರ್ಪೊರೇಟ್ ವಲಯದ ಬಾಡಿಗೆ ಗೂಂಡಾಗಳಿದ್ದಾರೆ; ಈ ದೇಶದ ಬಹುತೇಕ ರಾಜಕೀಯ ಪಕ್ಷಗಳ ಸರ್ಕಾರಗಳು ಪೊಲೀಸರ ಮೂಲಕ ಇಂಥ ಹೋರಾಟಗಳನ್ನು ಹತ್ತಿಕ್ಕಿವೆ; ಈ ಹೋರಾಟಗಳ ದಮನಕ್ಕೆ ಸರ್ಕಾರಿ ಕುತರ್ಕ, ಅಂಕಿ ಅಂಶ, ಮಾಧ್ಯಮಗಳ ಅಪಪ್ರಚಾರ, ನ್ಯಾಯಾಂಗ, ಅಭಿವೃದ್ಧಿಯ ನೆಪ ಮುಂತಾದ ಎಲ್ಲ ಅಸ್ತ್ರಗಳನ್ನೂ ಬಳಸಿವೆ.



ನೆಲ್ಸನ್ ಮಂಡೇಲ

ಎಂದೂ ಹಿಂಸೆಯನ್ನು ಬೋಧಿಸದ, ಪ್ರಚೋದಿಸದ ಲೇಖಕರು, ಚಿಂತಕರು, ಧಾರ್ಮಿಕ ಗುರುಗಳು ಹಾಗೂ ಅಮಾಯಕರ ವಿರುದ್ಧ ಕೂಡ ಇಸ್ಲಾಂ ಹಾಗೂ ಹಿಂದೂ ಧರ್ಮಗಳ ಹೆಸರಿನಲ್ಲಿ ಮೂಲಭೂತವಾದಿಗಳು ನೇಮಿಸಿದ ಬಾಡಿಗೆ ಹಂತಕರು ಇವತ್ತು ಎಲ್ಲೆಡೆ ಹಿಂಸೆಯನ್ನು ಚೆಲ್ಲತೊಡಗಿದ್ದಾರೆ. ಈ ಬಗ್ಗೆ ಮೌನವಾಗಿರುವ, ಹಂತಕರನ್ನು ರಕ್ಷಿಸುತ್ತಿರುವ ಸರ್ಕಾರಗಳಿವೆ, ರಾಜಕೀಯ ಪಕ್ಷಗಳಿವೆ. ಇಂಥ ಭಯಾನಕ ಸಂದರ್ಭದಲ್ಲಿ ಕೂಡ ವ್ಯಕ್ತಿಗಳು ಮತ್ತೆ ಗಾಂಧೀಜಿಯಿಂದಲೇ ನಿರ್ಭಯತೆಯನ್ನು ಕಲಿಯಬೇಕಾಗುತ್ತದೆ ಹಾಗೂ ಜನಸಂಘಟನೆಗಳನ್ನು ಗಾಂಧೀ ಮಾರ್ಗದಲ್ಲಿ ಮುನ್ನಡೆಸುವುದರಿಂದ ಮಾತ್ರ ಹೋರಾಟಗಾರರಿಗೆ, ಹೋರಾಟಗಳಿಗೆ ನೈತಿಕ ಶಕ್ತಿ ಬರುತ್ತದೆ ಎಂಬುದು ನನ್ನ ಆಳದ ನಂಬಿಕೆ. ಗಾಂಧೀಜಿ ಹೇಳಿಕೊಟ್ಟ 'ನಾಗರಿಕ ಅವಿಧೇಯತೆ' ಅಥವಾ 'ಸವಿನಯ ಕಾಯ್ದೆ ಭಂಗ'ದಂಥ ಅಸ್ತ್ರವನ್ನು ಇಡೀ ಜನಸಮುದಾಯಗಳು ಸಂಘಟಿತವಾಗಿ ಹಾಗೂ ಶಾಂತಿಯುತವಾಗಿ ಬಳಸಿದರೆ ಇವತ್ತು ಕೂಡ ವ್ಯವಸ್ಥೆ ಹಾಗೂ ಸರ್ಕಾರಗಳು ಮಣಿಯಲೇಬೇಕಾಗುತ್ತದೆ.

## 4

ಇದೀಗ ನಮ್ಮ ಸುತ್ತಮುತ್ತ ಕಾಣುವ ಹಲವು ಬಗೆಯ ಹಿಂಸೆಗಳಿಗೆ ಗಾಂಧೀವಾದದಲ್ಲಿ ಇನ್ನೂ ಉತ್ತರವಿದೆಯೇ ಎಂಬ ಜಟಿಲ ಪ್ರಶ್ನೆ ಕೂಡ ನಮ್ಮೆದುರಿಗಿದೆ. ಇವತ್ತು ಎದ್ದು ಕಾಣುತ್ತಿರುವ ಕೆಲ ಬಗೆಯ ಹಿಂಸೆಗಳನ್ನು ಹೀಗೆ ಪಟ್ಟಿ ಮಾಡಬಹುದು:

ದೇಶಗಳು ಇತರ ದೇಶಗಳ ಮೇಲೆ ನಡೆಸುತ್ತಿರುವ ಹಿಂಸೆಗಳು, ಉಗ್ರ ಧಾರ್ಮಿಕರಿಂದ